## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 7** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಪದ್ಯ ಭಾಗ : ಅಭಿಮನ್ಯು ಪರಾಕ್ರಮ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಮಾರ್ಚ್ 1 ನೇ ವಾರ** | * ಕವಿ, ಕೃತಿ ಪರಿಚಯ | * ಶಿಕ್ಷಕರು ಕುಮಾರವ್ಯಾಸನ ಪರಿಚಯ ಮಾಡಿಕೊಡುವರು.<br>ಮೂಲ ಹೆಸರು: ನಾರಣಪ್ಪ (ಗದುಗಿನ ನಾರಣಪ್ಪ)<br>ಕಾವ್ಯನಾಮ : ಕುಮಾರವ್ಯಾಸ<br>ಕಾಲ : ಕ್ರಿ.ಶ.1430<br>ಸ್ಥಳ : ಗದಗ ಜಿಲ್ಲೆಯ ಕೋಳಿವಾಡ<br>ಕೃತಿ : ಕರ್ಣಾಟ ಭಾರತ ಕಥಾಮಂಜರಿ<br>ಛಂದಸ್ಸು : ಭಾಮಿನಿ ಷಟ್ಪದಿ<br>ಬಿರುದು : ರೂಪಕ ಸಾಮ್ರಾಜ್ಯ ಚಕ್ರವರ್ತಿ | ಅಭ್ಯಾಸ ಹಾಳೆ<br>ಕವಿ, ಕೃತಿ ಪರಿಚಯ ಮಾಡಿಕೊಡಿ |
| | | * ಅಭಿಮನ್ಯು ಪರಾಕ್ರಮ ಪದ್ಯ ವಾಚನ | * ಶಿಕ್ಷಕರು ಮಾದರಿಯಾಗಿ ಪದ್ಯ ಭಾಗವನ್ನು ವಾಚಿಸುವರು. ನಂತರ ಮಕ್ಕಳನ್ನು ವಾಚಿಸಲು ಪ್ರೇರೇಪಿಸುವರು. | ಅವಲೋಕನ, ಅವಲೋಕನ ಪಟ್ಟಿ |
| | | * ಪದಗಳ ಅರ್ಥ ತಿಳಿಯುವರು | * ಅಂಘ್ರಿ–ಪಾದ, ಬೊಪ್ಪ–ತಂದೆ, ಆಹವ–ಯುದ್ಧ, ಭೇದನ–ಮುರಿಯುವುದು, ಕೃತಾಂತ–ಯಮ, ಅದಟು–ಪರಾಕ್ರಮ, ಎಸುಗೆ–ಬಾಣ ಪ್ರಯೋಗ, ಆಪೆ–ಸಮರ್ಥನಾಗುವೆ, ಮರೀಚಿ–ಮೃಗಜಲ, ಲೆಪ್ಪ–ಎರಕ, ಕೊಡನ ಮಗ–ದ್ರೋಣ, ವೆಗ್ಗಳ–ಅತಿಯಾಗಿ, ಅಮ್ಮೆ–ಸಾಧ್ಯವಿಲ್ಲ, ಮೋಹರ–ಸೈನ್ಯ, ನೇಮ–ಅಪ್ಪಣೆ, ರಿಪು–ವೈರಿ | ಅಂಘ್ರಿ, ಬೊಪ್ಪ, ಆಹವ, ಭೇದನ, ಕೃತಾಂತ, ಅದಟು, ಎಸುಗೆ, ಆಪೆ, ಮರೀಚಿ, ಲೆಪ್ಪ, ಕೊಡನ ಮಗ, ವೆಗ್ಗಳ, ಅಮ್ಮೆ, ಮೋಹರ,ನೇಮ,ರಿಪು ಪದಗಳ ಅರ್ಥ ತಿಳಿಸಿ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
| --- | --- | --- | --- | --- |
| | | * ಪೂರ್ವ ಕಥೆಯನ್ನು ಮಕ್ಕಳು ತಿಳಿಯುವರು<br><br>* ಪದ್ಯದ ಸಾರಾಂಶವನ್ನು ಕ್ರೋಢೀಕರಿಸುವರು. | * ಪುಟ ಸಂಖ್ಯೆ 130 ರಲ್ಲಿ ಮಕ್ಕಳು ಮೌನವಾಗಿ ಓದಿ ತಿಳಿಯುತ್ತಾರೆ<br><br>* ಅಭಿಮನ್ಯು ಧರ್ಮರಾಯನಿಗೆ 'ಎನಗೆ ಬೆಸಸೈ ಬೊಪ್ಪ, ತಾ ಬಲ್ಲೆನು ಮಹಾ ಆಹವದ ಒಳಗೆ ಪದ್ಮವ್ಯೂಹ ಭೇದನವ ಅನುವರನ ಗೆಲುವೆನು, ಕೃತಾಂತನ ಮನೆಗೆ ಕಳುಹುವೆನು ಅಹಿತರನು, ನೀನು ಇನಿತು ಚಿಂತಿಸಲೇಕೆ ಕಾಳಗಕೆ ಎನ್ನ ಕಳುಹು' ಎಂದು ಭಿನ್ನವಿಸಿಕೊಂಡನು.<br><br>* ಸಮರದಲ್ಲಿ ಮಹಾರಥರು ಮಾಡುವ ಬಾಣಪ್ರಯೋಗವನ್ನು ಹೇಗೆ ಸೈರಿಸುವೆ? ಎಂದು ಧರ್ಮರಾಯನು ಅಭಿಮನ್ಯುವಿಗೆ ಕೇಳಿದನು.<br><br>* "ಲೆಪ್ಪದುರುಗನ ಹಿಡಿಯಲೇತಕೆ ಗರುಡ ಮಂತ್ರವು" –ಎರಕದ ಹಾವಿಗೆ ಗರುಡ ಮಂತ್ರ ಫಲಿಸುವುದೇ ಎಂಬುದು ಮೇಲಿನ ವಾಕ್ಯಾರ್ಥ<br><br>* ವೈರಿಯ ಸೇನೆಯಲ್ಲಿ ಕೃಪ, ಗುರುನಂದನ, ರಾಧೇಯ, ಭೂರಿಶ್ರವ, ಜಯದ್ರಥ, ಇಂದುಧರರು ಇದ್ದಾರೆ ಎಂದನು ಧರ್ಮರಾಯ | ಪ್ರಶ್ನೋತ್ತರ:<br>ಅಭಿಮನ್ಯು ಧರ್ಮರಾಯನ ಬಳಿ ಯುದ್ಧಕ್ಕೆ ತೆರಳಲು ಹೇಗೆ ಕೋರಿಕೊಂಡನು?<br><br>ಪ್ರಶ್ನೋತ್ತರ:<br>ಧರ್ಮರಾಯನು ಅಭಿಮನ್ಯುವಿಗೆ ವೈರಿ ಸೈನ್ಯವನ್ನು ಹೇಗೆ ವಿವರಿಸಿದನು?<br><br>ಪ್ರಶ್ನೋತ್ತರ:<br>"ಲೆಪ್ಪದುರುಗನ ಹಿಡಿಯಲೇತಕೆ ಗರುಡ ಮಂತ್ರ" – ವಾಕ್ಯಾರ್ಥ ತಿಳಿಸಿ<br><br>ಅಭ್ಯಾಸ ಹಾಳೆ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | 'ಗಾಳಿ ಬೆಮರುವುದು ಉಂಟೆ'? ವಹ್ನಿ ಜ್ವಾಲೆ ಹಿಮಕೆ ಅಂಜುವುದೇ?' ಎಂದು ಅಭಿಮನ್ಯು ಪ್ರತ್ಯುತ್ತರ ನೀಡಿದನು. | ಅಭಿಮನ್ಯುವು ತನ್ನ ಪರಾಕ್ರಮವನ್ನು ಹೇಗೆ ತಿಳಿಸಿದನು? ರೂಪಕಗಳನ್ನು ಬಳಸಿ ತಿಳಿಸಿ. |
| | | | * ಧರ್ಮರಾಯನು "ಅರಿಬಲವ ನೀ ಖಂಡಿಗಳೆ ಮೋಹರ ಸಹಿತ ನಾ ಬಹೆನು ನಡೆ" ಎಂದು ಧರ್ಮರಾಯನು ಅಭಿಮನ್ಯುವಿಗೆ ಅಪ್ಪಣೆ ನೀಡಿದನು. | ಧರ್ಮರಾಯನು ಅಭಿಮನ್ಯುವಿಗೆ ಹೇಗೆ ಅಪ್ಪಣೆ ನೀಡಿದನು? |
| | | * ರೂಪಕಗಳ ಬಗ್ಗೆ ತಿಳಿಯುವರು. | * ಪದ್ಯದಲ್ಲಿ ಬಂದಿರುವ ರೂಪಕಗಳನ್ನು ಗುರುತಿಸುವರು.<br>1. ಮರೀಚಯ ತೊರೆಗೆ ಹರುಗೋಲಿಡುವರುಂಟೇ<br>2. ಲೆಪ್ಪದುರುಗನ ಹಿಡಿಯಲೇತಕೆ ಗರುಡಮಂತ್ರವು<br>3. ಗಾಳಿ ಬೆಮರುವುದುಂಟೆ | ಅಭ್ಯಾಸ ಹಾಳೆ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 2 ನೇ ವಾರ** | * ಛಂದಶಾಸ್ತ್ರದ ಪ್ರಾಸ, ಮಾತ್ರೆ, ಗಣ ಇವುಗಳ ಪರಿಚಯ ಮಾಡಿಕೊಳ್ಳುವರು, ಲೇಖನ ಚಿಹ್ನೆ ಮತ್ತು ಛಂದೋವಿನ್ಯಾಸಗಳನ್ನು ಅರಿತು ಓದುವುದು. | * ಛಂದಸ್ಸಿನ ಬಗ್ಗೆ ಶಿಕ್ಷಕರು ಮಕ್ಕಳಿಗೆ ತಿಳಿಸುತ್ತಾರೆ.<br>ಪದ್ಯ ರಚನಾ ಶಾಸ್ತ್ರ (ನಿಯಮ) ವನ್ನು ಛಂದಸ್ಸು ಎನ್ನುತ್ತೇವೆ<br>* ಛಂದಶಾಸ್ತ್ರವನ್ನು 3 ಗುಂಪುಗಳಾಗಿ ವಿಂಗಡಿಸಲಾಗಿದೆ. ಅವು ಯಾವುವೆಂದರೆ<br>1. ಪ್ರಾಸ 2. ಯತಿ 3. ಗಣ<br>1. ಪ್ರಾಸ : ಪದ್ಯದ ಪ್ರತಿ ಸಾಲಿನ ಆದಿ, ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಪ್ರಾಸ<br>2. ಯತಿ : ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣ<br>3. ಗಣ : ಗಣ ಎಂದರೆ ಗುಂಪು<br>ಛಂದಸ್ಸಿನಲ್ಲಿ ಮಾತ್ರಾ ಗಣ, ಅಕ್ಷರ ಗಣ ಮತ್ತು ಅಂಶಗಣಗಳೆಂಬ ಮೂರು ವಿಧಗಳಿವೆ.<br>ನಾವಿಲ್ಲಿ ಮಾತ್ರಾಛಂದಸ್ಸಿನ ಬಗ್ಗೆ ತಿಳಿಯೋಣ.<br>ಚಟುವಟಿಕೆ:<br>'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ<br>ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ'<br>ಮೇಲಿನ ಸಾಲುಗಳನ್ನು ಚಪ್ಪಾಳೆ ತಟ್ಟಿಕೊಂಡು ಗಟ್ಟಿಯಾಗಿ ಓದಿ<br>ಮೇಲಿನ ಸಾಲುಗಳನ್ನು ಓದಿದಾಗ ಕಂಡು ಬರುವ 'ನಡೆ' ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ 'ಮುಂದೆ' ಎಂಬ ಪದ ತೆಗೆದುಕೊಳ್ಳುವ ಸಮಯಕ್ಕೂ ವ್ಯತ್ಯಾಸವಿದೆ. ಹೀಗೆ ನಿರ್ದಿಷ್ಟ ಸಮಯ ತೆಗೆದುಕೊಳ್ಳುವ ಪದಗಳನ್ನು ಒಂದು ಕ್ರಮದಲ್ಲಿ ಜೋಡಿಸಲಾಗಿದೆ. ಈ ಜೋಡಣಾ ವ್ಯವಸ್ಥೆಯೇ 'ಲಯ'. | ಅವಲೋಕನ<br>ಅವಲೋಕನ ಪಟ್ಟಿ<br><br>ಅವಲೋಕನ<br>ಅವಲೋಕನ ಪಟ್ಟಿ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | ಚಟುವಟಿಕೆ:<br>ಕೆಳಗೆ ನೀಡಿರುವ ಅಕ್ಷರಗಳನ್ನು ನಿಲ್ಲಿಸದೇ ಜೋರಾಗಿ ಹೇಳಿ ನೋಡಿ:<br>ಅ ಇ ಉ ಋ ಎ ಒ<br>ಕ ಲಿ ಕು ರು ಗೆ ಮೊ<br>ಇವುಗಳನ್ನು ಹೇಳಲು ಒಂದು ಚಿಟಿಕೆಯಷ್ಟು ಕಾಲ ಸಾಕಾಗುತ್ತದೆ. ಛಂದಸ್ಸಿನ ಭಾಷೆಯಲ್ಲಿ ಇದನ್ನು 'ಲಘು' ಎಂದು ಹೇಳಲಾಗುತ್ತದೆ. ಲಘುವನ್ನು ಗುರುತಿಸಲು U ಎಂಬ ಚಿಹ್ನೆ ಬಳಸಲಾಗುತ್ತದೆ.<br>ಚಟುವಟಿಕೆ :<br>ಲಘು ಚಿಹ್ನೆ ಹಾಕು<br>U U U U U U<br>ಅ ಇ ಉ ಋ ಎ ಒ<br>U U U U U U<br>ಕ ಲಿ ಕು ರು ಗೆ ಮೊ<br>ಈಗ ಕೆಳಗೆ ನೀಡಿರುವ ಅಕ್ಷರಗಳನ್ನು ನಿಲ್ಲಿಸದೇ ಜೋರಾಗಿ ಹೇಳಿ ನೋಡಿ.<br>ಆ ಈ ಊ ಏ ಓ<br>ನಾ ಯೀ ಗೂ ಗೇ ಲೋ<br>ಇವುಗಳನ್ನು ಹೇಳಲು ಹಿಂದಿನ ಎರಡರಷ್ಟು ಕಾಲ ಬೇಕಾಗುತ್ತದೆ. ಛಂದಸ್ಸಿನ ಭಾಷೆಯಲ್ಲಿ ಇದನ್ನು 'ಗುರು' ಎಂದು ಹೇಳಲಾಗುತ್ತದೆ. ಗುರುವನ್ನು ಗುರುತಿಸಲು – ಎಂಬ ಚಿಹ್ನೆ ಬಳಸಲಾಗುತ್ತದೆ. | |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | – – – – –<br>ಆ ಈ ಊ ಏ ಓ<br>– – – – –<br>ನಾ ಯೀ ಗೂ ಗೇ ಲೋ<br>ಗುರು ಚಿಹ್ನೆ ಹಾಕಲು ಇರುವ ನಿಯಮಗಳನ್ನು ಪುಟ ಸಂಖ್ಯೆ 134 ರಲ್ಲಿನ ಚಟುವಟಿಕೆಗಳನ್ನು ಶಿಕ್ಷಕರು ಮಾಡಿಸುವರು.<br><br>ಮಾತ್ರಾಗಣ :<br>ಲಘು ಮತ್ತು ಗುರು ಇವುಗಳನ್ನು ಮಾತ್ರೆ ಎಂದೂ ಕರೆಯಲಾಗುತ್ತದೆ. ಲಘು(U)ವಿಗೆ ಒಂದು ಮಾತ್ರೆಯ ಬೆಲೆಯಾದರೆ ಗುರುವಿಗೆ(–) ಎರಡು ಮಾತ್ರೆಯಷ್ಟು ಬೆಲೆ.<br>(U) = ಒಂದುಮಾತ್ರೆ, (–)=ಎರಡು ಮಾತ್ರೆ<br>(UU) = ಎರಡು ಮಾತ್ರೆ, (U,-)= ಮೂರು ಮಾತ್ರೆ<br>(–,–)=ನಾಲ್ಕುಮಾತ್ರೆ, (UUUU)=ನಾಲ್ಕು ಮಾತ್ರೆ<br>(–,–,U)=ಐದು ಮಾತ್ರೆ, (U,-,-)=ಐದು ಮಾತ್ರೆ<br>(–,–,U) (UUUUU)=ಐದು ಮಾತ್ರೆ,<br>ಗಣ ಎಂದರೆ ಗುಂಪು ಒಂದು, ಎರಡು, ಮೂರು, ನಾಲ್ಕು, ಐದು ಮಾತ್ರೆಗಳ ಗುಂಪಿಗೆ ಮಾತ್ರಾಗಣ ಎಂದು ಕರೆಯಲಾಗುತ್ತದೆ. ಅಕ್ಷರಗಳನ್ನು ಮತ್ತು ಪದಗಳನ್ನು ಮಾತ್ರೆಯಲ್ಲಿ ಬೆಲೆ ಕಟ್ಟಿ ಅದನ್ನು ಗುಂಪು ಗುಂಪಾಗಿ ಮಾತ್ರಾಗಣದ ಗುಂಪು ಎಂದು ಕರೆಯಲಾಗುತ್ತದೆ. | ಅವಲೋಕನ<br>ಅವಲೋಕನ ಪಟ್ಟಿ |

| ಕ್ರ ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | U U U U U<br>ತ ಕ ತ ಕಿ ಟ = ಒಂದು ಮಾತ್ರೆಯ ಗುಂಪು<br>U U U U UU<br>ತ ಕ ತ ಕ ತ ಕ = ಎರಡು ಮಾತ್ರೆಯ ಗುಂಪು<br>U U U U U U U U U<br>ತ ಕಿ ಟ ತ ಕಿ ಟ ತ ಕಿ ಟ = ಮೂರು ಮಾತ್ರೆಯ ಗುಂಪು<br>U U U U U U U U U U U U U U U<br>ತ ಕ ತ ಕಿ ಟ ತ ಕ ತ ಕಿ ಟ ತ ಕ ತ ಕಿ ಟ<br>=ಎರಡು ಮತ್ತು ಮೂರು ಮಾತ್ರೆಯ ಗುಂಪು<br>U U U UU UU U U U UU UU<br>ತ ಕಿ ಟ ತ ಕ ತಕ ತ ಕಿ ಟ ತ ಕ ತಕ<br>U U U UU UU<br>ತ ಕಿ ಟ ತ ಕ ತಕ<br>= ಮೂರು ಮತ್ತು ನಾಲ್ಕು ಮಾತ್ರೆಯ ಗುಂಪು<br>ಇದೇ ರೀತಿ 3 ಮಾತ್ರೆಯ 4 ಗುಂಪು ಇರುವ ಪದ್ಯದ ಉದಾಹರಣೆ ಪುಟ ಸಂಖ್ಯೆ 136 ರಲ್ಲಿ ಗಮನಿಸಿ.<br>4 ಮಾತ್ರೆಯ 2 ಗುಂಪು ಇರುವ ಪದ್ಯದ ಉದಾಹರಣೆ ಪುಟ ಸಂಖ್ಯೆ 136 ರಲ್ಲಿ ಗಮನಿಸಿ.<br>ಚಟುವಟಿಕೆ:<br>'ಷಟ್ಪದಿ' ಹಾಗೂ ಭಾಮಿನಿ ಷಟ್ಪದಿ ಪುಟ ಸಂಖ್ಯೆ 136 ಮ್ತು 137 ರಲ್ಲಿನ ಚಟುವಟಿಕೆಯನ್ನು ಶಿಕ್ಷಕರು ತಿಳಿಸಿಕೊಡುವರು. | ಅವಲೋಕನ<br>ಅವಲೋಕನ ಪಟ್ಟಿ<br><br>ಅವಲೋಕನ<br>ಅವಲೋಕನ ಪಟ್ಟಿ |

## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 7** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಪೂರಕ ಪಾಠ : ನನ್ನ ಅಯ್ಯ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 3 ನೇ ವಾರ** | * ಕ್ಷೇತ್ರ : ಆಲಿಸುವುದು ಕಥೆ, ನಾಟಕ, ಪ್ರಬಂಧ ಮತ್ತು ವಿಚಾರಗೋಷ್ಠಿಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವುದು. | * ಧ್ವನಿಸುರಳಿಗಳ ಸಹಾಯದಿಂದ ಕಥೆಗಳನ್ನು ಆಲಿಸಲು ಅವಕಾಶ ಕಲ್ಪಿಸಿಕೊಡುವುದು.<br>* ಪ್ರಸ್ತುತ ಗದ್ಯದ ಲೇಖಕರ ಪರಿಚಯ<br>* ಶಿಕ್ಷಕರ ಮಾದರಿ ಓದು<br>* ಮಕ್ಕಳ ಮೌನ ಓದು ಹಾಗೂ ಗಟ್ಟಿ ಓದು<br>* 'ನನ್ನ ಅಯ್ಯ' ಗದ್ಯದ ಕಥೆಯನ್ನು ಶಿಕ್ಷಕರು ಅರ್ಥಪೂರ್ಣವಾಗಿ ವಿವರಿಸುವುದು<br>* ಕಥೆಯಲ್ಲಿ ಬರುವ ಪಾತ್ರಗಳನ್ನು, ಮುಖ್ಯಾಂಶಗಳನ್ನು ಗುರ್ತಿಸಿಕೊಂಡು ಹೇಳುವುದು (ವಿದ್ಯಾರ್ಥಿಗಳು)<br>* ಅನ್ಯಲಿಂಗ ರೂಪವನ್ನು ಬರೆಯುವರು<br>ಉದಾ :<br>ಬಾಲಕ – ಬಾಲಕಿ<br>ತಾಯಿ – ತಂದೆ<br>ಅಕ್ಕ – ಅಣ್ಣ<br>ಗಂಡು – ಹೆಣ್ಣು | ಅವಲೋಕನ<br>ಅವಲೋಕನ ಪಟ್ಟಿ<br>ಅಭ್ಯಾಸ ಹಾಳೆ |

ಅಭ್ಯಾಸದ ಹಾಳೆ – 1

ತರಗತಿ : 7 ಅಭಿಮನ್ಯು ಪರಾಕ್ರಮ ಮಾರ್ಚ್ – 2022

---

☞ ಕುಮಾರವ್ಯಾಸ ಕವಿ–ಕೃತಿ ಪರಿಚಯ ಮಾಡಿ

☞ ಪದಗಳ ಅರ್ಥ ಬರೆ.

ಅಂಘ್ರಿ, ಬೊಪ್ಪ, ಆಹವ, ಭೇದನ, ಕೃತಾಂತ, ಅದಟು, ಎಸುಗೆ, ಆಪೆ, ಮರೀಚಿ, ಲೆಪ್ಪ, ಕೊಡನ ಮಗ, ವೆಗ್ಗಳ, ಅಮ್ಮೆ, ಮೋಹರ,ನೇಮ,ರಿಪು

☞ ಈ ಪ್ರಶ್ನೆಗಳಿಗೆ ಉತ್ತರಿಸಿ.

1. ಧರ್ಮರಾಯನಿಗೆ ನಮಸ್ಕರಿಸಿದ ಅಭಿಮನ್ಯು ಹೇಳುವುದೇನು?
2. ಅಭಿಮನ್ಯುವಿನ ಮಾತಿಗೆ ಧರ್ಮರಾಯ ಏನು ಹೇಳುತ್ತಾನೆ?
3. ಧರ್ಮರಾಯನ ಮಾತಿಗೆ ಅಭಿಮನ್ಯು ಕೊಡುವ ಉತ್ತರವೇನು?

☞ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ನಿಮ್ಮ ಆಲಿಗಳಿಗೆ ಏನು ಇಕ್ಕುವೆ ಎಂದು ಅಭಿಮನ್ಯು ಹೇಳುತ್ತಾನೆ?
2. ವೈರಿವ್ಯೂಹದೊಳಗೆ ಇರುವ ವೀರರು ಯಾರು?

☞ ಕೆಳಗಿನ ವಾಕ್ಯಗಳನ್ನು ಯಾರು, ಯಾರಿಗೆ ಹೇಳಿದರು? ತಿಳಿಸಿ.

1. "ಶಿಶುವು ನೀನಲೆ ಮಗನೆ ಕಾದುವರಸಮಬಲರು ಕಣಾ !"
2. "ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ"

ಅಭ್ಯಾಸದ ಹಾಳೆ – 2

ತರಗತಿ : 7 ಅಭಿಮನ್ಯು ಪರಾಕ್ರಮ ಮಾರ್ಚ್ – 2022

☞ ಕೆಳಗಿನ ಅಕ್ಷರಗಳಿಗೆ ಗುರು ಲಘು ಹಾಕಿ:

ಕೋಳಿ ಕೂಗಿತು ಬೆಳಕು ಹರಿಯಿತು

ಕಾಗೆ ಕೋತಿ ಮೊಲ

☞ ಕೆಳಗಿನ ಪದಗಳಿಗೆ ಗುರು ಲಘು ಹಾಕಿ:

ಆಹವ ಬೊಪ್ಪ ಕೃತಾಂತ ಲೆಪ್ಪದುರುಗ

☞ ಬಿಡು ಮರೀಚಿಯ ತೊರೆಗೆ ಹರುಗೋ

ಲಿಡುವರುಂಟೇ ಲೆಪ್ಪದುರುಗನ

ಹಿಡಿಯಲೇತಕೆ ಗರುಡ ಮಂತ್ರವು ಚಪಲನೆನ್ನದಿರು.

ಈ ಪದ್ಯಭಾಗಕ್ಕೆ ಮಾತ್ರೆ ಹಾಕಿ. ಭಾಮಿನಿ ಷಟ್ಪದಿಯ ಸ್ವರೂಪವನ್ನು ಶಿಕ್ಷಕರಲ್ಲಿ ಚರ್ಚಿಸಿ

ಅಭ್ಯಾಸದ ಹಾಳೆ – 3

ತರಗತಿ : 7 | ನನ್ನ ಅಯ್ಯ | ಮಾರ್ಚ್ – 2022

☞ಈ ಕೆಳಗಿನ ಪದಗಳಿಗೆ ಅನ್ಯಲಿಂಗ ರೂಪವನ್ನು ಬರೆಯಿರಿ:

.1. ಬಾಲಕ = ______________

2.ತಾಯಿ = ______________

3. ಅಕ್ಕ = ______________

4. ಗಂಡು = ______________

5. ಯುವಕ = ______________

☞ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಪ್ರಸ್ತುತ ಗದ್ಯದ ಲೇಖಕಿಯ ಹೆಸರೇನು?

2. ಲೇಖಕಿಯ ತಂದೆಯ ಹೆಸರೇನು?

3. ದುರ್ಗಪ್ಪನವರು ತನ್ನ ಹೆಂಡತಿಯನ್ನು ಏನೆಂದು ಕರೆಯುತ್ತಿದ್ದಾರು?

4. ದುರ್ಗಪ್ಪನವರು ಯಾವ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು?

5. ದುರ್ಗಪ್ಪನವರು ತನ್ನ ಮಕ್ಕಳಿಗೆ ಯಾವ ಸಿನಿಮಾ ತೋರಿಸುತ್ತಿದ್ದರು?

6. ದುರ್ಗಪ್ಪನವರು ಎಂತಹ ಗುಣಗಳನ್ನು ಹೊಂದಿದ್ದರು?